ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/86/2015-16. ದಿನಾಂಕ:06-06-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಸಿ.ಮಲ್ಲಪ್ಪ ತಂದೆ ಲೇಟ್ ಚೆನ್ನಜ್ಜಿರ ಸಿದ್ದಪ್ಪ<br>2)ಚನ್ನಜ್ಜಿಸಿದ್ದಪ್ಪ ತಂದೆ ಮಲ್ಲಪ್ಪ<br>ಐಗಳಮಲ್ಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು</td><td>ಡಿ.ಬೋರಯ್ಯ ತಂದೆ ದೊಡ್ಡಬಸಪ್ಪ<br>ಐಗಳಮಲ್ಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 167ಸಿ. ವಿಸ್ತೀರ್ಣ 0-19 ಸೆಂಟ್ಸು ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 167ಸಿ. ವಿಸ್ತೀರ್ಣ 0-19 ಸೆಂಟ್ಸು ಜಮೀನನ್ನು ಸದರಿ ತಾಲೂಕು ಐಗಳಮಲ್ಲಾಪುರ ಗ್ರಾಮದ ಸಿ.ಮಲ್ಲಪ್ಪ ತಂದೆ ಲೇಟ್ ಚನ್ನಜ್ಜಿರ ಸಿದ್ದಪ್ಪ ಇವರು ದಿನಾಂಕ 10-02-2015 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 15-08-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಐಗಳಮಲ್ಲಾಪುರ ಗ್ರಾಮದ ಡಿ.ಬೋರಯ್ಯ ತಂದೆ ದೊಡ್ಡಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 07/2015-16. ದಿನಾಂಕ 16-09-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-12-2015 ರಿಂದ 06-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಚೌಡಾಪುರ ಗ್ರಾಮದ ಸನಂ 167ಸಿ. ವಿಸ್ತೀರ್ಣ 0-19 ಸೆಂಟ್ಸು ಜಮೀನು ಅರ್ಜಿದಾರರ ಚನ್ನಜ್ಜಿ ಸಿದ್ದಪ್ಪ ತಂದೆ ಮಲ್ಲಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 23-10-2000 ರಂದು ನಿಧನ ಹೊಂದಿರುತ್ತಾರೆ. ಹಾಗೂ ಅರ್ಜಿದಾರರ ತಾಯಿಯವರಾದ ಈರಮ್ಮ ಗಂಡ ಚನ್ನಜ್ಜಿ ಸಿದ್ದಪ್ಪ ಇವರು ದಿನಾಂಕ 18-05-1997 ರಂದು ನಿಧನ ಹೊಂದಿರುತ್ತಾರೆ. ಸದರಿ ಜಮೀನನ್ನು ಅರ್ಜಿದಾರರು ದಿನಾಂಕ 10-02-2015 ರಂದು ಪಾಲು ವಿಭಾಗದ ಪತ್ರ ಬರೆಯಿಸಿರುತ್ತಾರೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಸದರಿ ಜಮೀನು ಅರ್ಜಿದಾರರ ಹಿಸ್ಸ್ಯಾಕ್ಕೆ ಬಂದಿರುತ್ತದೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಹಾಗೂ ತಕರಾರುದಾರರು ನೊಂದಾಯಿತವಲ್ಲದ ಕ್ರಯ ಕರಾರು ಪತ್ರದ ಆಧಾರದ ಮೇಲೆ ತಕರಾರು ಸಲ್ಲಿಸಿ ಹಕ್ಕು ಬದಲಾವಣೆ ಮಾಡದಂತೆ ಕೋರಿದ್ದನ್ನು ಪರಿಗಣಿಸಲು ಬರುವುದಿಲ್ಲವೆಂದು ತಮ್ಮ ವಾದವನ್ನು ಮಂಡಿಸುತ್ತಾ ತಕರಾರು ಅರ್ಜಿಯನ್ನು ತಳ್ಳಿಹಾಕಿ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನನ್ನು ಈ ಮುಂಚೆ ತಕರಾರು ನೀಡಿದ್ದು ಆದರೆ ಅರ್ಜಿದಾರರು ತಮ್ಮ ಹೆಸರಿಗೆ ಹಕ್ಕು ಬದಲಾವಣೆಯಾದ ನಂತರ ತಕರಾರುದಾರರಿಗೆ ಹಕ್ಕು ಬದಲಾವಣೆ ಮಾಡಿಸಿ ಕೊಡುವುದಾಗಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 167ಸಿ. ವಿಸ್ತೀರ್ಣ 0-19 ಸೆಂಟ್ಸು ಜಮೀನನ್ನು ದಿನಾಂಕ 10-02-2015 ರ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರಾದ ಸಿ.ಮಲ್ಲಪ್ಪ ತಂದೆ ಲೇಟ್ ಚನ್ನಜ್ಜಿರ ಸಿದ್ದಪ್ಪ. ಐಗಳಮಲ್ಲಾಪುರ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪವಿಭಾಗಾಧಿಕಾರಿಗಳು
ನ್ಯಾಯಾಲಯ ಹೊಸಪೇಟೆ / ಹರಪನಹಳ್ಳಿ
ಹೊಸಪೇಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಿ.ಮಲ್ಲಪ್ಪ ತಂದೆ ಲೇಟ್ ಚನ್ನಜ್ಜಿರ ಸಿದ್ದಪ್ಪ. ಚನ್ನಜ್ಜಿ ಸಿದ್ದಪ್ಪ ತಂದೆ ಮಲ್ಲಪ್ಪ ಐಗಳಮಲ್ಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಜಿ.ಎಂ.ಮಲ್ಲಿಕಾರ್ಜುನಯ್ಯ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಡಿ.ಬೋರಯ್ಯ ತಂದೆ ದೊಡ್ಡಬಸಪ್ಪ. ಐಗಳಮಲ್ಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎಂ.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.